ಅಜ್ಜಿ ತನ್ನ ಹತ್ತಿರ ಕಾಗದಗಳಿಲ್ಲವಲ್ಲ ಏನು ಮಾಡುವುದು ಎಂದುಬಿಟ್ಟರು.

ಅಷ್ಟು ಹೊತ್ತಿಗೆ ಅಮ್ಮ ತನ್ನ ಸಂಗ್ರಹದಿಂದ ಬಣ್ಣ ಬಣ್ಣದ ಕಾಗದದ ಚೀಲಗಳು, ಜಾಹೀರಾತು ಕಾಗದಗಳು, ಕರಪತ್ರಗಳನ್ನು ತಂದು ಅನಿತಾಳಿಗೆ ಕೊಟ್ಟರು.

ಈಗ ದೋಣಿ ಮಾಡುವ ಕೆಲಸ. ಅನಿತಾಳಿಗೆ ಆನಂದ ತಡೆಯಲಾಗಲೇ ಇಲ್ಲ. ಕುಣಿದೇ ಕುಣಿದಳು. ಅಪ್ಪ ಕಾಗದದ ದೋಣಿಗಳನ್ನು ಮಾಡಲು ನೆಲದ ಮೇಲೆ ಕುಳಿತರು. ಹಾಳೆಗಳನ್ನು ಮಡಚಿ, ಎಳೆದು ಬಿಡಿಸುತ್ತಿದ್ದಂತೆ ಬಣ್ಣ ಬಣ್ಣದ ಕಾಗದದ ದೋಣಿಗಳು ಮೂಡುತ್ತಿದ್ದವು.

ಈಗ ದೋಣಿ ಅರಳಿಸುವುದರಲ್ಲಿ ಅನಿತಾ ಮತ್ತು ಅಪ್ಪ ಮಾತ್ರ ಇರಲಿಲ್ಲ.

ಮೊದಲು ಅಣ್ಣ ಬಂದು ಸೇರಿಕೊಂಡು ದೋಣಿ ಮಾಡಿದ. ಆಮೇಲೆ ತಾತ ಕಾಗದ ತಂದು ದೋಣಿ ಮಾಡಿದರು. ಅಜ್ಜಿ ಅಡುಗೆ ಬಿಟ್ಟು ಬಂದು ದೋಣಿ ತಯಾರಿಯ ಆನಂದ ನೋಡಲಾರಂಭಿಸಿದರು. ಅಮ್ಮ ಇನ್ನೊಂದು ಮತ್ತೊಂದು ಎಂದು ಬಣ್ಣ ಬಣ್ಣದ ಕಾಗದಗಳನ್ನು ತರುತ್ತಲೇ ಇದ್ದರು. ಅನಿತಾ ದೋಣಿಗಳನ್ನು ಹಿಡಿದುಕೊಂಡು ಕುಣಿಯುತ್ತಲೇ ಇದ್ದಳು.

ಓಹೋ! ಬಂದೇ ಬಿಟ್ಟಿತು ದೋಣಿಗಳನ್ನು ನೀರಿಗೆ ಇಳಿಸುವ ಸಮಯ.

ದೋಣಿಗಳೊಂದಿಗೆ ಅನಿತಾ, ಅಣ್ಣ, ಅಪ್ಪ ಅಂಗಳಕ್ಕೆ ಹೋದರು. ಅಮ್ಮ ಅಜ್ಜಿ ಕೂಡಾ ಸೇರಿದರು. ತಾತ ಕೂಡಾ ಬಂದರು. ಒಂದೊಂದಾಗಿ ಅವರೆಲ್ಲಾ ದೋಣಿಗಳನ್ನು ಹರಿಯುವ ನೀರಿಗೆ ಬಿಟ್ಟರು.

ಬಣ್ಣ ಬಣ್ಣದ ಚಿಕ್ಕ ಚಿಕ್ಕ ದೋಣಿಗಳು. ದೊಡ್ಡ ದೊಡ್ಡ ದೋಣಿಗಳು. ದೋಣಿಗಳು ಗುಂಪಾಗಿ ತೇಲುತ್ತಾ ತೇಲುತ್ತಾ ನೀರಿನಲ್ಲಿ ಮುಂದೆ ಹೋದವು. ಕೆಲವು ದೋಣಿಗಳು ಒಂಟಿಯಾಗಿಯೂ ತೇಲಿದವು.

ಅನಿತಾ ಖುಷಿಯಿಂದ ದೋಣೀ ದೋಣೀ ಎಂದು ಕೂಗುತ್ತಾ ಚಪ್ಪಾಳೆ ತಟ್ಟಿ ಕುಣಿದಳು. ದೋಣಿಗಳ ಜೊತೆ ಜೊತೆ ಓಡಿದಳು. ಅವಳ ಕುಣಿತಕ್ಕೆ ಎಲ್ಲೆಡೆ ನೀರ ಹನಿಗಳು ಸಿಡಿಯಲಾರಂಭಿಸಿತು.

ಆಗಲೇ ಅಕ್ಕಪಕ್ಕದ ಮನೆಗಳಿಂದ ಮಕ್ಕಳು ಹೊರ ಬಂದರು. ದೊಡ್ಡವರೂ ಸೇರಿದರು. ಅವರೂ ತಮ್ಮ ಕಾಗದದ ದೋಣಿಗಳನ್ನು ತಂದು ಹರಿಯುವ ನೀರಿನಲ್ಲಿ ಬಿಟ್ಟರು. ಮನೆಗಳ ಮುಂದಿನ ಅಂಗಳದಲ್ಲಿ ಈಗ ಸಾಲು ಸಾಲು ಬಣ್ಣ ಬಣ್ಣದ ದೋಣಿಗಳು. ಅವು ತೇಲುತ್ತಾ, ಮುಳುಗುತ್ತಾ ಸಾಗಿದವು. ಕೆಲವಂತೂ ಒಂದನ್ನೊಂದು ಹಿಂದಕ್ಕೆ ಹಾಕುತ್ತಾ ರಭಸದಿಂದ ಓಡಿದವು.

ಇದು ಕೇವಲ ಮಳೆನೀರಿನಲ್ಲಿ ದೋಣಿ ತೇಲಿಬಿಡುವ ಆಟವಾಗಲಿಲ್ಲ. ಅಮ್ಮ ಅಪ್ಪ ಅಜ್ಜಿ ತಾತನಿಗೆ ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿತು. ಮಕ್ಕಳೊಡನೆ ಆಡುತ್ತಾ ಅವರೂ ಮಕ್ಕಳಾದರು.

ಈಗ ಮಳೆ ಬಂದು ಅಂಗಳದಲ್ಲಿ ನೀರು ಹರಿದಾಗಲೆಲ್ಲಾ ಅನಿತಾಳ ಮನೆಯ ಸುತ್ತಮುತ್ತಲೆಲ್ಲಾ ಬಣ್ಣಬಣ್ಣದ ಕಾಗದದ ದೋಣಿಯಾಟ ಕಾಯಂ. ■

# ಚಾಕ್ಲೆಟ್ ಪದ್ಯ

■ ಸಿದ್ದನಗೌಡ ಬಿಜ್ಜೂರ. ಸರೂರ

ಕಲೆ: ಸಂತೋಷ್ ಸಸಿಹಿತ್ಲು



ಚಾಕ್ಲೆಟ್ ಚಾಕ್ಲೆಟ್ ಚಾಕ್ಲೆಟ್
ಆಹಾ! ಬಣ್ಣದ ಚಾಕ್ಲೆಟ್
ಬಾಯಲ್ಲಿಟ್ರೆ ಆಹಾ! ಓಹೋ!
ಚಾಕ್ಲೆಟ್ ಚಾಕ್ಲೆಟ್ ಚಾಕ್ಲೆಟ್

ಬರ್ತಡೇ ಬಂದ್ರೂ ಚಾಕ್ಲೆಟ್
ನ್ಯೂ ಯಿಯರ್ ಅಂದ್ರೂ ಚಾಕ್ಲೆಟ್
ಝೆಂಡಾ ಹಬ್ಬಕು ಬೊಗಸೆ ತುಂಬಾ
ಚಾಕ್ಲೆಟ್ ಚಾಕ್ಲೆಟ್ ಚಾಕ್ಲೆಟ್

ಅಜ್ಜ ಅಜ್ಜಿಗೂ ಚಾಕ್ಲೆಟ್
ಅಣ್ಣ ಅಕ್ಕಗೂ ಚಾಕ್ಲೆಟ್
ಆಂಟಿ ಅಂಕಲ್ ಮಮ್ಮಿ ಡ್ಯಾಡಿಗೂ
ಚಾಕ್ಲೆಟ್ ಚಾಕ್ಲೆಟ್ ಚಾಕ್ಲೆಟ್

ನನಗೂ ಬೇಕು ಚಾಕ್ಲೆಟ್
ನಿನಗೂ ಬೇಕು ಚಾಕ್ಲೆಟ್
ಅವಳು ಇವಳು ಅವರು ಇವರಿಗೂ
ಚಾಕ್ಲೆಟ್ ಚಾಕ್ಲೆಟ್ ಚಾಕ್ಲೆಟ್

ಆಹಾ! ಆಹಾ! ಚಾಕ್ಲೆಟ್
ಓಹೋ! ಓಹೋ! ಚಾಕ್ಲೆಟ್
ಮಕ್ಕಳ ಲೋಕದ ಮಾಂತ್ರಿಕ ತಿನಿಸು
ಚಾಕ್ಲೆಟ್ ಚಾಕ್ಲೆಟ್ ಚಾಕ್ಲೆಟ್

ಚಾಕ್ಲೆಟ್ ಚಾಕ್ಲೆಟ್ ಚರಕ್
ಹಾಳೆ ಹರಿತು ಪುರಕ್
ಕೈಗೆ ಬಂತು ಟಣಕ್
ಬಾಯಿಗಿಳಿತು ಗಬಕ್

ನಾಲಗೆ ಮೇಲೆ ಸುರಕ್
ಗಂಟಲೊಳಗೆ ಗುಳಕ್
ಹೊಟ್ಟೆ ಸೇರಿ ಬುಳಕ್
ಆಮೇಲ್ ಪುಳಕ್ ಪುಳಕ್ ■

## ಕುಂಚ ಪ್ರಪಂಚ



**ಆವ್ನಿ**
3ನೇ ತರಗತಿ
ಶ್ರೀ ಜ್ಞಾನಾಕ್ಷಿ ವಿದ್ಯಾಪೀಠ,
ಬೆಂಗಳೂರು

